# ಎಣ್ಣೆ ಎನಲು ಹಾಸ್ಯವೇ?



‘ಎಣ್ಣೆ’ ಇರದ ನಾಗರಿಕತೆಯುಂಟೆ? ಅನಿಮೇಷರಾದ ದೇವತೆಗಳಿಗೂ ಸುರಾಪಾನವೆನ್ನುವ ಎಣ್ಣೆಯೇಟಿನಲ್ಲಿ ಕಣ್ಣೆವೆಗಳು ಭಾರವೆನ್ನಿಸುವಾಗ, ಮರ್ತ್ಯರಾದ ನಾವೆಲ್ಲ ಎಣ್ಣೆಗೆ ಅತೀತರಾಗುವುದುಂಟೆ...

**■ ಸುಮಾ ರಮೇಶ್**

‘ಎಣ್ಣೆ’ ಎಂಬ ಪದ ಈಚೆಗೆ ನಿಘಂಟಿನ ಅರ್ಥವನ್ನೂ ಮೀರಿ ನಾನಾರ್ಥ ಬಿಂಬಿಸುತ್ತಾ ಅಪಾರ್ಥಕ್ಕೆ ಎಡೆಮಾಡಿಕೊಡುತ್ತಿದೆ. ಎಣ್ಣೆ ಅರ್ಥಾತ್ ಆಯಿಲ್ ಅನ್ನು ವಾಹನದ ಲಿವರ್, ಬ್ರೇಕ್, ಕೇಬಲ್‌ಗಳಿಗೆ ಹಾಕಿ, ನಂತರ ಫನಲ್ ಬಳಸಿ ಎಂಜಿನ್‌ಗೂ ತುಂಬಿ ಅದರ ನಾಬ್ ಟೈಟ್ ಮಾಡುವುದಿದೆ. ಆದರೆ ತುಟಿಗಳನ್ನೇ ಫನಲ್ ಮಾಡಿಕೊಂಡು ಬಾಯಿಗೆ ಎಣ್ಣೆ ಸುರಿದುಕೊಳ್ಳುವಾಗ ಟೈಟ್ ಮಾಡಲು ನಾಬ್ ಆಗಲೀ ಲಿಡ್ ಆಗಲೀ ಇಲ್ಲದೆ ಅದು ಹೆಚ್ಚಿನ ಪ್ರಮಾಣದಲ್ಲಿ ಒಳಹೋಗಿ ಬಾಡಿಯೇ ಟೈಟ್ ಆಗಿಬಿಡುವುದು.

ಅಸಲಿಗೆ ಹೀಗೆ ಹೆಚ್ಚು ಎಣ್ಣೆ ಸೇವಿಸಿ ‘ಟೈಟ್’ ಆದ ಮಂದಿ ನಮ್ಮ ಕಣ್ಣಿಗೆಂದೂ ಹಾಗೆ ಕಾಣರು. ಬದಲಿಗೆ ಇವರೆಲ್ಲಾ ಕೈಕಾಲು ಕುತ್ತಿಗೆಯನ್ನು ‘ಲೂಸ್’ ಬಿಟ್ಟು ಜೋಲಿ ಹೊಡೆಯುವುದನ್ನು ನೋಡಿರುವೆವು. ಕುಡಿದ ಎಣ್ಣೆ ನೆತ್ತಿಗೇರಿ ನರನಾಡಿಗಳೆಲ್ಲ ಸಡಿಲಗೊಂಡಿರುತ್ತವೆ. ಇದು ದೇಹದ ಇಂಟರ್ನಲ್ ಆಯಿಲ್ ಫಿಲ್ಲಿಂಗ್ ಕಥೆಯಾದರೆ, ಎಕ್ಸ್‌ಟರ್ನಲ್ ಆಗಿಯೂ ದೇಹಕ್ಕೆ ಎಣ್ಣೆ ತುಂಬಿಸುವುದಿದೆ. ಮನೆಯಲ್ಲಿ ಹಿರಿಯರಿದ್ದರೆ ಒಂದು ಬಟ್ಟಲಿನಲ್ಲಿ ಎಣ್ಣೆ ಬಿಸಿ ಮಾಡಿಕೊಂಡು ಮನೆಮಂದಿಯ ನೆತ್ತಿಗೆ ಅದನ್ನು ತಟ್ಟಿ, ಕುಟ್ಟಿ ತಂಪು ಮಾಡುವರು. ನಂತರ ಇಡೀ ದೇಹದ ಮೇಲ್ಮೈಗೆ ಎಣ್ಣೆಯನ್ನು ಹರಿಯಬಿಟ್ಟು ಹದವಾಗಿ ಮಸಾಜ್ ಮಾಡಿ ಸನ್ ಬಾತ್‌ಗೆ ಅನುವು ಮಾಡಿಕೊಡುವರು. ಆ ಸಮಯ ಬಾಯೊಳಗೂ ಒಂದೆರಡು ಚಮಚ ಎಣ್ಣೆ ಬಿಟ್ಟುಕೊಂಡು ಅದನ್ನು ಪುಲ್ ಮಾಡುತ್ತಾ ಫುಲ್ ತೈಲಾಭಿಷೇಕದಿಂದ ತೋಯುವುದಿದೆ.

‘ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ’ ಎಂಬುದು ನಮ್ಮ ಹಿರಿಯರ ಧ್ಯೇಯೋಕ್ತಿಯಾಗಿತ್ತು. ವಾರಕ್ಕೊಮ್ಮೆ ಅಭ್ಯಂಜನ ಮಾಡಿದರೆ ಅಮೃತತ್ವ ಲಭಿಸುವುದು ಎಂಬುದನ್ನು ಕುವೆಂಪು ಅವರು ತಮ್ಮ ‘ಅಜ್ಜಯ್ಯನ ಅಭ್ಯಂಜನ’ದಲ್ಲಿ ಸುಲಲಿತವಾಗಿ ವಿವರಿಸಿದ್ದಾರೆ.

ಇದು ಸಜೀವಿಗಳ ಕಥೆಯಾದರೆ ನಿರ್ಜೀವ ವಸ್ತುಗಳಿಗೂ ಎಣ್ಣೆ ಕುಡಿಯುವ ಹುಕಿ ಇಲ್ಲದಿಲ್ಲ. ಕಬ್ಬಿಣದ ಬಾಗಿಲು, ಕಿಟಕಿ, ಗೇಟು ಇನ್ನಿತರ ಸಲಕರಣೆಗಳಿಗೆ ಆಗಾಗ ಎಣ್ಣೆ ತೋರಿಸದಿದ್ದರೆ ಅವು ಕೀರಾಟ ನಡೆಸುತ್ತವೆ. ರಾಟೆ, ಹೊಲಿಗೆ ಮೆಷಿನ್‌ನ ಗಾಲಿಗಳು ಎಣ್ಣೆ ಇಲ್ಲದಿದ್ದರೆ ಒಂದೆಡೆ ವಾಲಿಕೊಂಡು ಮುಷ್ಕರ ಹೂಡುತ್ತವೆ. ಅವುಗಳ ಕೀಲುಗಳಿಗೆ ಆಗಾಗ ಎಣ್ಣೆ ಸುರಿದು ನೇವರಿಸುತ್ತಿದ್ದರೆ ‘ಎಣ್ಣೆ ನಿಮ್ದು... ಓಟ ನಮ್ದು’ ಎನ್ನುತ್ತಾ ಸರಾಗವಾಗಿ ಓಡುತ್ತವೆ.

ಅಡುಗೆಮನೆಯಲ್ಲಿ ಎಣ್ಣೆ ಇಲ್ಲದಿದ್ದರೆ ಯಾವ ಕೆಲಸವೂ ಸಾಗದು. ಎಣ್ಣೆ ಇಲ್ಲದ ಖಾದ್ಯಗಳು ರುಚಿಯಲ್ಲೂ ಹಿಂದೆ. ಚಿಪ್ಸ್, ಹಪ್ಪಳ, ಸಂಡಿಗೆಗಳು ಎಣ್ಣೆ ಕುಡಿದು ಹಿಗ್ಗಿದರೆ, ಪೂರಿಗಳು ಎಣ್ಣೆಯ ಸಖ್ಯದಲ್ಲಿ ಬುರುಬುರನೆ ಉಬ್ಬುತ್ತವೆ. ಎಣ್ಣೆಯಲ್ಲೂ ಎಳ್ಳೆಣ್ಣೆ, ಸೂರ್ಯಕಾಂತಿ ಎಣ್ಣೆ, ಹೊಂಗೆ ಎಣ್ಣೆ, ಕಡ್ಲೇಕಾಯಿ ಎಣ್ಣೆ, ತೆಂಗಿನೆಣ್ಣೆ, ಬೇವಿನೆಣ್ಣೆ ಹೀಗೆ ಹಲವು ಬಗೆಯ ಎಣ್ಣೆಗಳಿವೆ. ಮಾಂಸ ಮಡ್ಡಿ ಎಂದರೆ ಮೂಗು ಮುರಿಯುವವರೂ ಮೂಳೆ